## ಟಿ-20 ವಿಶ್ವಕಪ್‌ನ ಹಿಂದಿನ ಚಾಂಪಿಯನ್ನರು

| ವರ್ಷ | ಆತಿಥ್ಯ ರಾಷ್ಟ್ರ | ಚಾಂಪಿಯನ್ | ರನ್ನರ್ಸ್ ಅಪ್ |
|---|---|---|---|
| 2007 | ದಕ್ಷಿಣ ಆಫ್ರಿಕಾ | ಭಾರತ | ಪಾಕಿಸ್ತಾನ |
| 2009 | ಇಂಗ್ಲೆಂಡ್ | ಪಾಕಿಸ್ತಾನ | ಶ್ರೀಲಂಕಾ |
| 2010 | ವೆಸ್ಟ್ ಇಂಡೀಸ್ | ಇಂಗ್ಲೆಂಡ್ | ಆಸ್ಟ್ರೇಲಿಯಾ |
| 2012 | ಶ್ರೀಲಂಕಾ | ವೆಸ್ಟ್ ಇಂಡೀಸ್ | ಶ್ರೀಲಂಕಾ |
| 2014 | ಬಾಂಗ್ಲಾದೇಶ | ಶ್ರೀಲಂಕಾ | ಭಾರತ |
| 2016 | ಭಾರತ | ವೆಸ್ಟ್ ಇಂಡೀಸ್ | ಇಂಗ್ಲೆಂಡ್ |
| 2021 | ಯುಎಇ, ಒಮನ್ | ಆಸ್ಟ್ರೇಲಿಯಾ | ನ್ಯೂಜಿಲೆಂಡ್ |
| 2022 | ಆಸ್ಟ್ರೇಲಿಯಾ | ಇಂಗ್ಲೆಂಡ್ | ಪಾಕಿಸ್ತಾನ |

15 ಸದಸ್ಯರನ್ನು ಒಳಗೊಂಡ ಭಾರತ ತಂಡದಲ್ಲಿ ನಾಲ್ಕು ಜನ ಬ್ಯಾಟಿಂಗ್ ಪರಿಣತರು, ಇಬ್ಬರು ವಿಕೆಟ್ ಕೀಪರ್‌ಗಳು, ಇಬ್ಬರು ಮಧ್ಯ ವೇಗಿ ಬೌಲಿಂಗ್ ಹಾಗೂ ಆಲ್‌ರೌಂಡ್ ಜವಾಬ್ದಾರಿ ನಿರ್ವಹಣೆ ಮಾಡುವವರು, ಇಬ್ಬರು ಆಫ್ ಸ್ಪಿನ್, ಇಬ್ಬರು ರಿಸ್ಟ್ ಸ್ಪಿನ್ನರ್‌ಗಳು ಮತ್ತು ಮೂವರು ವೇಗಿಗಳನ್ನು ಒಳಗೊಂಡಿದೆ.

ಗಾಯದಿಂದ ಚೇತರಿಸಿಕೊಂಡ ಬಳಿ ಸೂರ್ಯಕುಮಾರ್ ಯಾದವ್ ಐಪಿಎಲ್‌ನಲ್ಲಿ 'ಸನ್‌ರೈಸರ್ಸ್ ಹೈದರಾಬಾದ್' ವಿರುದ್ಧದ ಪಂದ್ಯದಲ್ಲಿ ಶತಕ ಹೊಡೆದಿದ್ದರು. ಮಧ್ಯಮ ಕ್ರಮಾಂಕದ ಬ್ಯಾಟಿಂಗ್‌ನಲ್ಲಿ ಯಾದವ್ ಸೇರಿದಂತೆ ಹಲವರ ನಡುವೆ ಅಂತಿಮ ಹನ್ನೊಂದರ ಬಳಗದಲ್ಲಿ ಸ್ಥಾನ ಗಳಿಸಲು ಪೈಪೋಟಿಯಿದ್ದು, ಪ್ರತಿ ಪಂದ್ಯದಲ್ಲಿ ಆಟಗಾರರು ತೋರುವ ಸಾಮರ್ಥ್ಯದ ಆಧಾರದ ಮೇಲೆ ಅವರ ಮುಂದಿನ ಪಂದ್ಯದ ಅವಕಾಶ ನಿರ್ಧಾರಗೊಳ್ಳಲಿದೆ.

ಹಾರ್ದಿಕ್ ಪಾಂಡ್ಯ, ಶಿವಂ ದುಬೆ, ರವೀಂದ್ರ ಜಡೇಜ ಮತ್ತು ಅಕ್ಷರ ಪಟೇಲ್




2007ರ ಟಿ20 ವಿಶ್ವಕಪ್ ಟ್ರೋಫಿಯೊಂದಿಗೆ ತಂಡದ ನಾಯಕ ಮಹೇಂದ್ರಸಿಂಗ್ ಧೋನಿ

## ಭಾರತವೇ ಫೇವರಿಟ್, ಆದರೆ...

**-ಅಭಿಮನ್ಯು ಮಿಥುನ್**
ಭಾರತ ತಂಡದ ಮಾಜಿ ಕ್ರಿಕೆಟಿಗ



ಪ್ರತಿಭಾನ್ವಿತ ಆಟಗಾರರ ಪಡೆ ಹೊಂದಿರುವ ಭಾರತ ತಂಡವೇ ಟಿ–20 ವಿಶ್ವಕಪ್‌ನಲ್ಲಿ ಗೆಲ್ಲುವ ನೆಚ್ಚಿನ ತಂಡ ಎನ್ನುವುದರಲ್ಲಿ ಅನುಮಾನವೇನಿಲ್ಲ. ಆದರೆ ಹಲವು ಅಡೆತಡೆಗಳನ್ನು ಮತ್ತು ಸವಾಲುಗಳನ್ನು ದಾಟಬೇಕು.

ಭಾರತದ ದೊಡ್ಡ ಬ್ಯಾಟಿಂಗ್ ಶಕ್ತಿಯೇ ವಿರಾಟ್ ಕೊಹ್ಲಿ ಮತ್ತು ರೋಹಿತ್ ಶರ್ಮಾ ಅವರ ಲಯ. ಐಪಿಎಲ್‌ನಲ್ಲಿ ಉತ್ತಮ ಪ್ರದರ್ಶನ ತೋರಿರುವ ಸೂರ್ಯಕುಮಾರ್ ಯಾದವ್ ಮಧ್ಯಮ ಕ್ರಮಾಂಕದಲ್ಲಿ ಹೇಗೆ ತಂಡವನ್ನು ಕೊಂಡೊಯ್ಯುತ್ತಾರೆ ಎನ್ನುವುದರ ಆಧಾರದ ಮೇಲೆ ಫಲಿತಾಂಶ ನಿರ್ಧಾರವಾಗುತ್ತದೆ. ಯಾಕೆಂದರೆ ಐಪಿಎಲ್ ಮತ್ತು ವಿಶ್ವಕಪ್‌ನಲ್ಲಿ ಆಡುವಾಗ ಮನಸ್ಥಿತಿ, ಪರಿಸ್ಥಿತಿ ಬೇರೆಯೇ ತೆರನಾಗಿರುತ್ತದೆ. ಎರಡೂ ಕಡೆ ಭಿನ್ನ ಸವಾಲುಗಳು ಇರುತ್ತವೆ. ಭಾರತದ ಮಧ್ಯಮ ಕ್ರಮಾಂಕದ ಕೆಲ ಬ್ಯಾಟ್ಸ್‌ಮನ್‌ಗಳು ಟಿ–20 ವಿಶ್ವಕಪ್‌ನಂಥ ಪ್ರತಿಷ್ಠಿತ ಟೂರ್ನಿಗೆ ಹೊಸಬರು. ಹೀಗಾಗಿ ಈ ಸವಾಲು ಹೇಗೆ ಎದುರಿಸುತ್ತಾರೆ ಎನ್ನುವ ಕುತೂಹಲವೂ ಇದೆ. ಚುಟುಕು ಕ್ರಿಕೆಟ್‌ನಲ್ಲಿ ಎಲ್ಲ ತಂಡಗಳು ರನ್ ಹೊಳೆ ಹರಿಸುವ ಕಾರಣ ಬ್ಯಾಟ್ಸ್‌ಮನ್‌ಗಳ ಮೇಲೆ ಜವಾಬ್ದಾರಿ ಹೆಚ್ಚಿದೆ.

ಐಪಿಎಲ್‌ನಲ್ಲಿ ಸಾಕಷ್ಟು ಪಂದ್ಯಗಳನ್ನಾಡಬೇಕಾಗುತ್ತದೆ. ಅಲ್ಲಿರುವ ಮನಸ್ಥಿತಿಗೂ ವಿಶ್ವಕಪ್ ಆಡುವಾಗ ಇರಬೇಕಾದ ಮನಸ್ಥಿತಿಗೂ ಸಾಕಷ್ಟು ವ್ಯತ್ಯಾಸವಿದೆ. ಟಿ–20 ಮಾದರಿಯಲ್ಲಿ ವೆಸ್ಟ್ ಇಂಡೀಸ್ ತಂಡವಂತೂ ಅಗಾಧ ಶಕ್ತಿ ಹೊಂದಿದೆ. ಈ ಬಾರಿ ವಿಂಡೀಸ್ ಬಳಗಕ್ಕೆ ತವರಿನಲ್ಲಿಯೂ ಪಂದ್ಯಗಳು ನಡೆಯಲಿದ್ದು ಅವರಿಗೆ ಶಕ್ತಿ ತುಂಬಲಿದೆ. ಭಾರತ ತಂಡದಲ್ಲಿ ಸ್ಪಿನ್ನರ್‌ಗಳಿಗೆ ಆದ್ಯತೆ ನೀಡಲಾಗಿದೆ. ಕಳೆದ ವರ್ಷದ ಏಕದಿನ ವಿಶ್ವಕಪ್‌ನಲ್ಲಿ ಕೆ.ಎಲ್. ರಾಹುಲ್, ಶ್ರೇಯಸ್ ಅಯ್ಯರ್ ತಂಡದಲ್ಲಿದ್ದರು. ಅನುಭವಿಗಳೂ ಆಗಿದ್ದರು. ಆದರೆ ಈ ಬಾರಿ ರೋಹಿತ್ ಶರ್ಮಾ ಮತ್ತು ಕೊಹ್ಲಿ ಅವರನ್ನು ಹೊರತುಪಡಿಸಿದರೆ ಅನುಭವಿಗಳ ಸಂಖ್ಯೆ ಕಡಿಮೆ.

ಅಮೆರಿಕದಲ್ಲಿ ಪಿಚ್‌ಗಳನ್ನು ಆಡುವ ಅನುಭವ ಹೇಗಿರುತ್ತದೆ ಎನ್ನುವುದನ್ನು ನಾನು ಬಲ್ಲೆ. ಆ ರಾಷ್ಟ್ರ ಕ್ರಿಕೆಟ್‌ಗಾಗಿ ಸಾಕಷ್ಟು ಉತ್ತೇಜನ ನೀಡುತ್ತಿದೆ. ವಿಶ್ವಕಪ್ ಟೂರ್ನಿ ಆಯೋಜನೆ ಮೂಲಕ ತಾನೂ ಈ ಕ್ರೀಡೆಯಲ್ಲಿ ಬೆಳೆಯಬೇಕೆನ್ನುವ ಆಕಾಂಕ್ಷೆಯುಳ್ಳ ರಾಷ್ಟ್ರ ಎನ್ನುವುದನ್ನು ತೋರಿಸಿಕೊಟ್ಟಿದೆ. ಈ ಟೂರ್ನಿ ಅಮೆರಿಕ ರಾಷ್ಟ್ರಕ್ಕೆ ಕ್ರಿಕೆಟ್ ಬಲ ತಂದುಕೊಡುವುದರಲ್ಲಿ ಅನುಮಾನವೇನಿಲ್ಲ.

ಈಗಿರುವ ಭಾರತ ತಂಡದ ಶಕ್ತಿ ಅವಲೋಕಿಸಿದರೆ ಸೆಮಿಫೈನಲ್ ಪ್ರವೇಶಿಸುವುದು ಕಷ್ಟವೇನಲ್ಲ. ಜಗತ್ತಿನ ಸರ್ವ ಶ್ರೇಷ್ಠ ತಂಡಗಳ ನಡುವಿನ ಹೋರಾಟವಾದ ಕಾರಣ ಪ್ರಶಸ್ತಿ ಗೆಲ್ಲುವ ಎರಡು ಹೆಜ್ಜೆಗಳು (ಸೆಮಿಫೈನಲ್ ಮತ್ತು ಫೈನಲ್) ಹೇಗೆ ಇರಲಿವೆ ಎನ್ನುವುದು ಪ್ರಮುಖ ಚರ್ಚೆಯ ವಿಷಯ. ಭಾರತವೇ ಗೆಲ್ಲಬೇಕು ಎನ್ನುವುದು ನನ್ನ ಆಶಯ.

## ಭಾರತ ತಂಡದ ಪಂದ್ಯಗಳ ವೇಳಾಪಟ್ಟಿ

| ದಿನಾಂಕ | ಸ್ಥಳ | ಎದುರಾಳಿ |
|---|---|---|
| ಜೂನ್ 05 | ನಾಸವ್ ಕೌಂಟಿ ಮೈದಾನ, ನ್ಯೂಯಾರ್ಕ್ | ಐರ್ಲೆಂಡ್ |
| ಜೂನ್ 09 | ನಾಸವ್ ಕೌಂಟಿ ಮೈದಾನ, ನ್ಯೂಯಾರ್ಕ್ | ಪಾಕಿಸ್ತಾನ |
| ಜೂನ್ 12 | ನಾಸವ್ ಕೌಂಟಿ ಮೈದಾನ, ನ್ಯೂಯಾರ್ಕ್ | ಅಮೆರಿಕ |
| ಜೂನ್ 15 | ಬ್ರೊವರ್ಡ್ ಕೌಂಟಿ ಮೈದಾನ, ಫ್ಲೊರಿಡಾ | ಕೆನಡ |